**ಉಡುಪಿ ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಚೇರಿ,**
**ರಜತಾದ್ರಿ, ಉಡುಪಿ ಜಿಲ್ಲೆ**

ಸಂಖ್ಯೆ: ಬಿ3/ಪ್ರತಿಭಾ ಕಾರಂಜಿ 2014-15 ದಿನಾಂಕ: 16.07.2014

**ಸುತ್ತೋಲೆ**

**ವಿಷಯ:** ಪ್ರತಿಭಾ ಕಾರಂಜಿ ಸ್ಪರ್ಧೆಗಳ ಆಯೋಜನೆಗೆ ಜಿಲ್ಲಾ ಮಟ್ಟದ ಮಾರ್ಗದರ್ಶಿ ಸೂತ್ರಗಳು
**ಉಲ್ಲೇಖ:** 1. ನಿರ್ದೇಶಕರು(ಪ್ರೌಢ ಶಿಕ್ಷಣ) ಇವರ ಜ್ಞಾಪನ ಸಂ.ನ್ಯ.ಸಂ.ವಿ. ಪ್ರ.ಕಾ.ಸ್ಪ.ಕಾ/ 01/2014-15 ದಿನಾಂಕ 23.06.2014
2. ದಿ.15.7.2014 ರಂದು ಜರುಗಿದ ಜಿಲ್ಲಾ ಮಟ್ಟದ ಸಮಿತಿಯ ಸಭಾ ನಡವಳಿ

===

ಉಡುಪಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳನ್ನು ನವೆಂಬರ್ 11 ಮತ್ತು 12 ರಂದು (ಈ ದಿನಾಂಕವನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರಿಂದ ಖಚಿತಪಡಿಸಿಕೊಳ್ಳಲಾಗುವುದು) ಕಾರ್ಕಳ ವಲಯದ ಎಸ್.ಆರ್. ಪಬ್ಲಿಕ್ ಸ್ಕೂಲ್, ಹೆಬ್ರಿ ಇಲ್ಲಿ ಸಂಘಟಿಸಲಾಗುವುದು. ವಲಯವಾರು ಸ್ಪರ್ಧೆಗಳನ್ನು ಅಗಸ್ಟ ಕಡೆಯ ವಾರದಲ್ಲಿ, ಕ್ಲಸ್ಟರ್ ಹಂತದ ಸ್ಪರ್ಧೆಗಳನ್ನು ಆಗಸ್ಟ ಮೊದಲ ವಾರದಲ್ಲಿ ಹಾಗೂ ಶಾಲಾ ಹಂತದ ಸ್ಪರ್ಧೆಗಳನ್ನು ಜುಲೈ ತಿಂಗಳಿನಲ್ಲಿ ಹಾಗೂ ಸಂಘಟಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಕ್ರಮವನ್ನು ವಹಿಸಲು ತಿಳಿಸಿದೆ.

ಕ್ಲಸ್ಟರ್ ಹಂತದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ನಗದು ರೂಪದ ಬಹುಮಾನಕ್ಕಾಗಿ ಪ್ರತಿ ಕ್ಲಸ್ಟರ್‌ಗೆ ರೂ.9,120/-, ವಲಯ ಮಟ್ಟದ ಆಯೋಜನೆಗಾಗಿ ತಲಾ ರೂ.92,500/-, ಜಿಲ್ಲಾ ಮಟ್ಟದ ಸ್ಪರ್ಧೆಗಳ ಆಯೋಜನೆಗಾಗಿ ರೂ ರೂ.2,42,268/- ಅನುದಾನವನ್ನು ಬಿಡುಗಡೆಗೊಳಿಸಲಾಗುವುದು.

ಪ್ರಾಥಮಿಕ ಶಾಲಾ ವಿಭಾಗದಲ್ಲಿ ಕಂಠಪಾಠ ಸ್ಪರ್ಧೆಗಳಿಗಾಗಿ ಪಠ್ಯಪುಸ್ತಕದಲ್ಲಿರುವ ಪದ್ಯಗಳನ್ನು ಮಾತ್ರ ಪರಿಗಣಿಸುವುದು. ಚಿತ್ರಕಲೆಗಾಗಿ 1 ರಿಂದ 4 ನೇ ತರಗತಿ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಮುಕ್ತ ಆಯ್ಕೆ. 5 ರಿಂದ 7 ನೇ ತರಗತಿ ವಿಭಾಗದಲ್ಲಿ **ಪ್ರಾಣಿ ಸಂಗ್ರಹಾಲಯ, ನಮ್ಮೂರ ಶಾಲೆ** ಈ ಎರಡು ವಿಷಯಗಳಲ್ಲಿ ಒಂದನ್ನು ಸ್ಪರ್ಧಾ ಆರಂಭಕ್ಕೆ ಮುನ್ನ ಪ್ರಕಟಿಸುವುದು.

ಪ್ರೌಢಶಾಲಾ ವಿಭಾಗದ ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಈ ಕೆಳಗಿನಂತೆ ಎರಡು ವಿಷಯಗಳನ್ನು ಪ್ರಕಟಿಸಲಾಗಿದ್ದು, ಶಾಲಾ, ಕ್ಲಸ್ಟರ್ ಹಾಗೂ ತಾಲೂಕು ಮಟ್ಟದಲ್ಲಿ ಇದೇ ವಿಷಯಗಳನ್ನು ನಿಗದಿಪಡಿಸಬಹುದಾಗಿದೆ.

ಭಾಷಣ ಸ್ಪರ್ಧೆ 1. ಸರ್ಕಾರಿ ಶಾಲೆಗಳ ಅಭಿವೃದ್ಧಿಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ.
2. ಮಕ್ಕಳು ಶಾಲೆಯಿಂದ ಹೊರಗುಳಿಯುವುದು – ಶೈಕ್ಷಣಿಕ ಪ್ರಗತಿಗೆ ಮಾರಕ

ಪ್ರಬಂಧ ಸ್ಪರ್ಧೆ 1. ಪರಿಸರ ಸಂರಕ್ಷಣೆಯ ಧ್ಯೇಯ ವಾಕ್ಯ – ರೆಡ್ಯೂಸ್, ರಿಯೂಸ್, ರಿಸೈಕಲ್
(ಕನ್ನಡದಲ್ಲಿ ಮಾತ್ರ) 2. ಮಕ್ಕಳಲ್ಲಿ ಅಪೌಷ್ಟಿಕತೆ

ಚರ್ಚಾ ಸ್ಪರ್ಧೆ 1. ವಿದ್ಯಾರ್ಥಿಗಳ ಮೊಬೈಲ್ ಬಳಕೆ ಪೂರಕವೋ ಮಾರಕವೋ
2. ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಬೆಳೆಸುವಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಅಡ್ಡಿಯಾಗಿದೆ

ಚಿತ್ರಕಲೆ: 1. ನಿರ್ಮಲ ಗ್ರಾಮ
2. ಅಕ್ಷರ ದಾಸೋಹ

ಧಾರ್ಮಿಕ ಪಠಣ : ಸ್ಪರ್ಧಾಳುಗಳ ಆಯ್ಕೆಗೆ ಮುಕ್ತ ಅವಕಾಶ.(ನಿರ್ಣಾಯಕರಿಗೆ ಪ್ರತಿಯನ್ನು ನೀಡಬೇಕು)

ಇದಲ್ಲದೇ ಛದ್ಮವೇಶ ಸ್ಪರ್ಧೆಯಲ್ಲಿ ಮುಖವಾಡ ಬಳಕೆಗೆ ಅವಕಾಶವಿರುವುದಿಲ್ಲ. ಜಾನಪದ ನೃತ್ಯ ಮತ್ತು ಕೋಲಾಟ ವಿಷಯಕ್ಕೆ ಸಂಬಂಧಿಸಿದಂತೆ ಹಿಮ್ಮೇಳವನ್ನು ಶಾಲಾ ವಿದ್ಯಾರ್ಥಿಗಳೇ ನಿರ್ವಹಿಸಬೇಕು. ದೈವಾರಾಧನೆಯ ಕಲೆ 'ಕೋಲ' ನೃತ್ಯವನ್ನು ಜಾನಪದ ನೃತ್ಯ ವಿಭಾಗದಲ್ಲಿ ಮಾಡುವಂತಿಲ್ಲ. ಉಳಿದಂತೆ ಉಲ್ಲೇಖಿತ ಜ್ಞಾಪನದಲ್ಲಿ ನೀಡಿರುವ ಎಲ್ಲ ನಿಬಂದನೆ ಹಾಗೂ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸುವಂತೆ ಸೂಚಿಸಿದೆ.

ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಉಡುಪಿ

**ರಿಗೆ:** ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಡುಪಿ/ಬ್ರಹ್ಮಾವರ/ಬೈಂದೂರ/ಕಾರ್ಕಳ/ಕುಂದಾಪುರ